ನಾನು ಕೆಲಸಕ್ಕಿಂತ ಡಾನ್ಸ್–ನಾಟಕಗಳನ್ನೇ ಹೆಚ್ಚು ಎಂಜಾಯ್ ಮಾಡುತ್ತಿದ್ದೇನೆ ಎಂದು ಅರಿವಾಗಿದ್ದೂ ಆವಾಗಲೇ. ಇದನ್ನೇ ನನ್ನ ವೃತ್ತಿಯನ್ನಾಗಿ ಯಾಕೆ ಮಾಡಿಕೊಳ್ಳಬಾರದು ಅನಿಸಿತು.

ಅದನ್ನೇ ಅಪ್ಪ–ಅಮ್ಮನ ಬಳಿ ಹೋಗಿ ಹೇಳಿಕೊಂಡೆ. ಅವರು 'ಖಂಡಿತ ಒಳ್ಳೆಯದು. ಆದರೆ ಇಲ್ಲಿಯವರೆಗೆ ನೀನು ಮಾಡಿಕೊಂಡು ಬಂದಿರುವುದು ವೇದಿಕೆಯ ಮೇಲಿನ ನಟನೆ. ಕ್ಯಾಮೆರಾ ಎದುರಿನ ನಟನೆ ಬೇರೆಯೇ ರೀತಿಯದ್ದಾಗಿರುತ್ತದೆ. ಅದನ್ನು ನೀನು ಕಲಿತುಕೊಂಡೇ ಆ ಕ್ಷೇತ್ರಕ್ಕೆ ಇಳಿಯಬೇಕು' ಎಂದರು. ಉನ್ನತ ಶಿಕ್ಷಣಕ್ಕೆ ವಿದೇಶಕ್ಕೆ ಹೋಗುವ ಯೋಚನೆಯನ್ನು ಕೈಬಿಟ್ಟ ನಾನು ಮುಂಬೈನ 'ರೋಷನ್ ತನೇಜಾ ಆಕ್ಟಿಂಗ್ ಸ್ಕೂಲ್'ಗೆ ಸೇರಿಕೊಂಡೆ. ನಟನಾ ಜೀವನ ಶುರುವಾಗಿದ್ದು ಹೀಗೆ.

◆ **'ಕಾಲ್ ಕೆಜಿ ಪ್ರೀತಿ' ನಿಮ್ಮ ಮೊದಲ ಸಿನಿಮಾ. ಅದು ಹೊಸಬರ ತಂಡ. ಚಿತ್ರರಂಗಕ್ಕೆ ಸ್ಟಾರ್‌ನಟರ ಸಿನಿಮಾ ಮೂಲಕ ಲಾಂಚ್ ಆಗಬೇಕು ಎಂಬ ಆಸೆ ನಿಮಗೆ ಇರಲಿಲ್ಲವೇ?**

ನಾನಿಲ್ಲಿ ಬಂದಿರುವುದು ಕಲಾವಿದೆಯಾಗುವುದಕ್ಕೆ. ದೊಡ್ಡ ಮಟ್ಟದಲ್ಲಿ ಲಾಂಚ್ ಆಗಿ, ತಕ್ಷಣವೇ ದೊಡ್ಡ ಯಶಸ್ಸೂ ಸಿಕ್ಕಿಬಿಟ್ಟಿದ್ದರೆ ನಾನೀಗ ಕಲಿತುಕೊಂಡಿರುವ ಎಷ್ಟೋ ಸೂಕ್ಷ್ಮಗಳು ಅರ್ಥವಾಗುತ್ತಿರಲಿಲ್ಲವೇನೋ. ನಾನು ಈಗ ಯಾವ್ಯಾವ ಸಿನಿಮಾದಲ್ಲಿ ನಟಿಸಿದ್ದೇನೋ ಅವ್ಯಾವುದರ ಕುರಿತು ಯಾವುದೇ ಪಶ್ಚಾತ್ತಾಪ ಇಲ್ಲ. ಇಲ್ಲಿಯವರೆಗೆ ಯಾವತ್ತೂ ನಾನು ನನ್ನ ಅಪ್ಪ–ಅಮ್ಮನ ಬಳಿಗೆ ಹೋಗಿ ನನ್ನನ್ನು ಲಾಂಚ್ ಮಾಡಿ ಅಂತಾಗಲಿ, ಇನ್ಯಾವುದೇ ರೀತಿಯ ಸಹಾಯ ಮಾಡಿ ಎಂದಾಗಲಿ ಕೇಳಿಲ್ಲ. ನನ್ನ ಶ್ರಮ ಮತ್ತು ಪ್ರತಿಭೆಯಿಂದಲೇ ಗುರ್ತಿಸಿಕೊಳ್ಳಬೇಕು, ನನ್ನ ಕಾಲ ಮೇಲೆ ನಿಂತುಕೊಳ್ಳಬೇಕು ಎಂದೇ ಅಂದುಕೊಂಡಿದ್ದೇನೆ. ಅಪ್ಪ–ಅಮ್ಮನೂ ಯಾವತ್ತೂ ನಿನಗೆ ಅವಕಾಶ ಕೊಡಿಸುತ್ತೇನೆ ಎಂದು ಮುಂದೆ ಬಂದಿಲ್ಲ. ಅವರಿಗೂ ನಾನು ಇಂಡಿಪೆಂಡೆಂಟ್ ಆಗಿ ಬೆಳೆಯುವುದೇ ಬೇಕಿತ್ತು.

ನಾನು ಆಕ್ಟಿಂಗ್ ಡಿಪ್ಲೊಮಾ ಮಾಡುತ್ತಿದ್ದಾಗಲೇ ಒಂದು ಸಿನಿಮಾದ ಆಡಿಷನ್‌ಗೆ ಕರೆ ಬಂದಿತ್ತು. ಅದಕ್ಕೆ ನಾಯಕಿಯಾಗಿ ಆಯ್ಕೆಯೂ ಆಗಿದ್ದೆ. ಯೋಗಿ ನಾಯಕನಾಗಿದ್ದ 'ಸ್ನೇಕ್ ನಾಗ' ಎಂಬ ಆ ಸಿನಿಮಾಗೆ ಪ್ರತಿಭಾ ನಂದಕುಮಾರ್ ನಿರ್ದೇಶಕಿ. ಆದರೆ ಆ ಸಿನಿಮಾ ನಿಂತುಹೋಯಿತು. ಇನ್ನೊಂದು ಸಿನಿಮಾದಲ್ಲಿ ನಾನು, ಶ್ರದ್ಧಾ ಶ್ರೀನಾಥ್ ಮತ್ತು ಮುಖ್ಯಮಂತ್ರಿ ಚಂದ್ರು ಅವರ ಮಗ ನಟಿಸಬೇಕಿತ್ತು. ಅದೂ ಶುರುವಾಗಿ ಸುಮಾರು ಮುಕ್ಕಾಲು ಚಿತ್ರೀಕರಣ ಮುಗಿದ ಮೇಲೆ ನಿಂತುಹೋಯ್ತು. ಆ ಸಂದರ್ಭದಲ್ಲಿ ನಾನು ಯಾವುದೇ ಸಿನಿಮಾಗೆ ಆಡಿಷನ್ ಇದ್ದರೂ ಹೋಗಿ ಭಾಗವಹಿಸುತ್ತಿದ್ದೆ. 'ಕಾಲ್ ಕೆಜಿ ಪ್ರೀತಿ' ಕೂಡ ಹಾಗೆಯೇ ಎರಡು ಮೂರು ಸುತ್ತಿನ ಆಡಿಷನ್‌ನಲ್ಲಿ ಭಾಗವಹಿಸಿಯೇ ಆಯ್ಕೆಯಾಗಿದ್ದು.

'ಕಾಲ್ ಕೆಜಿ ಪ್ರೀತಿ' ಸಿನಿಮಾಗೆ ಹೊಸ ನಿರ್ದೇಶಕ, ಹೊಸ ನಾಯಕ ಆದರೂ ಯೋಗರಾಜ ಭಟ್ ಅವರ ಬ್ಯಾನರ್ ಬೆಂಬಲ ಇತ್ತು. ಚಿತ್ರದ ಶೇ. 70 ಎಂಬತ್ತರಷ್ಟು ಭಾಗ ನಾನು ವಿಹಾನ್ ಇಬ್ಬರೇ ಇರುವುದು. ಅಷ್ಟು ಸ್ಕ್ರೀನ್‌ಸ್ಪೇಸ್, ನಟನೆಗೆ ಅವಕಾಶ ಎಷ್ಟು ಜನರಿಗೆ ಸಿಗುತ್ತದೆ? ಒಬ್ಬ ಕಲಾವಿದೆಯಾಗಿ ಬೆಳೆಯುವುದಕ್ಕೆ ಆ ಸಿನಿಮಾ ನನ್ನ ಪಾಲಿಗೆ ಮೆಟ್ಟಿಲಾಗಿದ್ದಂತೂ ಹೌದು. ನಂತರ 'ಯೋಗಿ ದುನಿಯಾ' ಸಿನಿಮಾ ಮಾಡಿದೆ. ನಂತರ 'ಒಂಥರಾ ಬಣ್ಣಗಳು'. ಇತ್ತೀಚೆಗೆ ಬಿಡುಗಡೆಯಾದ 'ಪ್ರೀಮಿಯರ್ ಪದ್ಮಿನಿ' ಸಿನಿಮಾದ ಪಾತ್ರಕ್ಕೂ ಮೆಚ್ಚುಗೆ ಸಿಗುತ್ತಿದೆ. ಈ ಎಲ್ಲ ಸಿನಿಮಾಗಳಿಂದ ಸಾಕಷ್ಟು ವಿಷಯಗಳನ್ನು ಕಲಿತಿದ್ದೇನೆ.

◆ **ವೃತ್ತಿಜೀವನದ ನಾಳೆಗಳ ಬಗ್ಗೆ ನಿಮಗೆ ಯಾವ ರೀತಿಯ ಕನಸುಗಳಿವೆ?**

ಮೊದಲನೇ ಸಿನಿಮಾದಿಂದ ನೋಡಿದರೂ ಇಲ್ಲಿಯವರೆಗೆ ನಟಿಸಿರುವ ಎಲ್ಲ ಪಾತ್ರಗಳೂ



ಒಂದಕ್ಕಿಂತ ಇನ್ನೊಂದು ಭಿನ್ನವಾಗಿವೆ. ಅದೇ ನನ್ನ ಗುರಿ; ಉದ್ದೇಶ. ಸಿನಿಮಾ ಹಿಟ್ ಆಗುವುದು, ಹಣ ಮಾಡುವುದು ಮುಖ್ಯವೇ ಆದರೂ ಅದಕ್ಕಿಂತಲೂ ನಾನು ಒಂದು ಸಿನಿಮಾದಿಂದ ಇನ್ನೊಂದು ಸಿನಿಮಾಗೆ ಕಲಾವಿದೆಯಾಗಿ ಬೆಳೆಯುತ್ತಿರಬೇಕು. ನನ್ನ ಕೌಶಲಗಳು ವಿಸ್ತಾರವಾಗುತ್ತ ಹೋಗಬೇಕು. ಅದಕ್ಕೆ ಅವಕಾಶ ಇರುವಂಥ ಸಿನಿಮಾಗಳು, ಪಾತ್ರಗಳನ್ನು ಮಾಡಬೇಕು ಎನ್ನುವುದೇ ನನ್ನ ಆಸೆ. 'ಕಾಜಿ' ಎಂಬ ಕಿರುಚಿತ್ರವೊಂದರಲ್ಲಿಯೂ ನಟಿಸಿದ್ದೇನೆ. ಅದರಲ್ಲಿ ಏಳರಿಂದ ಎಂಟು ವರ್ಷದ ಮಗ ಇರುವ ಚಿಕ್ಕ ವಯಸ್ಸಿನ ವಿಧವೆಯ ಪಾತ್ರ. ಮುಖ್ಯವಾಹಿನಿ ಸಿನಿಮಾಗಳಲ್ಲಿ ನನಗೆ ಅಂಥ ಪಾತ್ರಗಳು ಸಿಗುತ್ತವೋ ಇಲ್ಲವೋ ಗೊತ್ತಿಲ್ಲ. ಆ ಥರ ಪಾತ್ರಗಳು ನನಗೆ ತುಂಬಾನೇ ಇಷ್ಟ. ನಾನೇನೇ ಪಾತ್ರ ಮಾಡಿದರೂ ಅದು ಜನರ ಮನಸ್ಸನ್ನು ಮುಟ್ಟಬೇಕು. ನಾನೂ ಕಲಾವಿದೆಯಾಗಿ ಬೆಳೆಯಬೇಕು.

◆ **ಕನ್ನಡ ಚಿತ್ರರಂಗದಲ್ಲಿ ನಾಯಕನಟಿಯರ ವೃತ್ತಿಜೀವನದ ಅವಧಿ ತುಂಬ ಕಡಿಮೆ. ಆ ನಿಟ್ಟಿನಲ್ಲಿ ನೋಡಿದರೆ ಸ್ವಲ್ಪ ತಡವಾಗಿ ಚಿತ್ರರಂಗಕ್ಕೆ ಪ್ರವೇಶ ಮಾಡಿದಿರಿ ಅನಿಸುವುದಿಲ್ಲವೇ?**

ಆ ಥರ ಏನೂ ಇಲ್ಲ. ನಾನು ಅಜ್ಜಿಯಾಗಿ, ಸಾಯುವತನಕ ಆಕ್ಟಿಂಗ್ ಮಾಡ್ತೀನಿ. ನಾನು ಯಾವತ್ತೂ ಕಮರ್ಷಿಯಲ್ ಹೀರೋಯಿನ್ ಆಗಬೇಕು ಎಂದು ಕನಸಿಟ್ಟುಕೊಂಡು ಇಲ್ಲಿಗೆ ಬಂದವಳೇ ಅಲ್ಲ. ಉಮಾಶ್ರೀ, ತಾರಾ, ಸುಧಾರಾಣಿ ಅವರೆಲ್ಲ ಎಲ್ಲ ರೀತಿಯ ಪಾತ್ರಗಳಲ್ಲಿಯೂ ನಟಿಸಿದ್ದಾರೆ. ಅವರು ಕಮರ್ಷಿಯಲ್ ಸಿನಿಮಾಗಳ ನಾಯಕಿಯಾಗಿಯೂ ನಟಿಸಿದ್ದಾರೆ. ಪೋಷಕನಟಿಯರಾಗಿ ಈಗಲೂ ಒಳ್ಳೆಯ ಪಾತ್ರಗಳಲ್ಲಿ ನಟಿಸುತ್ತಿದ್ದಾರೆ. ಅಂಥವರನ್ನು ನಾವು ಉದಾಹರಣೆಯಾಗಿ ಇಟ್ಟುಕೊಳ್ಳೋಣ. ಇಂದು ಬಂದು ನಾಳೆ ಹೋಗುವವರನ್ನು ನಾವ್ಯಾಕೆ ಮಾದರಿಯಾಗಿ ಇಟ್ಟುಕೊಳ್ಳಬೇಕು?

◆ **ಮದುವೆ ಆದಮೇಲೆ ನಟನಾಜೀವನ ಮುಗಿಯಿತು ಎಂಬ ಮಿಥ್ ಚಿತ್ರರಂಗದಲ್ಲಿದೆ. ನಿಮ್ಮ ಮದುವೆ ನಿಶ್ಚಿತವಾಗಿದೆ. ಇದರಿಂದ ನಿಮ್ಮ ವೃತ್ತಿಜೀವನದ ಮೇಲೆ ಪರಿಣಾಮ ಉಂಟಾಗುವುದೇ?**

ಅಂಥ ಮಾತುಗಳಿಗೆ ಕಿವಿಗೊಡದೆ ನಮ್ಮ ಪಾಡಿಗೆ ನಾವು ಕೆಲಸ ಮಾಡುತ್ತಿರಬೇಕು. ಯಾಕೆಂದರೆ ಆ ಥರ ಯೋಚನೆ ಮಾಡುವವರು ಸಾಕಷ್ಟು ಕಡಿಮೆ ಆಗಿದ್ದಾರೆ. ಸಾಕಷ್ಟು ಪ್ರಗತಿಪರ ಯೋಚನೆಯ ನಿರ್ದೇಶಕರು ನಮ್ಮ ನಡುವೆ ಇದ್ದಾರೆ. ತುಂಬ ಜನ ಕೇಳ್ತಾರೆ ನನ್ನ, 'ಮದುವೆ ಆದಮೇಲೆ ಆಕ್ಟಿಂಗ್ ಮಾಡುವುದನ್ನು ನಿಲ್ಲಿಸಿಬಿಡುತ್ತೀರಾ?' ಎಂದು. ಆಗ ನಾನು 'ನೀವು ಗಂಡಸರಿಗೂ ಇದೇ ಪ್ರಶ್ನೆ ಕೇಳ್ತೀರಾ?' ಎಂದು ಕೇಳ್ತೀನಿ. ಇಂಥ ಪ್ರಶ್ನೆಗಳು, ಮಾತಿಗೆಲ್ಲ ತಲೆಕೆಡಿಸಿಕೊಳ್ಳದೆ ನಾವು ಮುಂದುವರಿದರೆ ಮುಂದೆ ಬರುವ ಪೀಳಿಗೆಗೆ ಹೊಸ ಮಾದರಿಯೊಂದು ರೂಪುಗೊಳ್ಳುತ್ತದೆ.

ನಮ್ಮ ಚಿತ್ರರಂಗದಲ್ಲಿಯೇ ಇಂಥ ಮನಸ್ಥಿತಿಗಳು ಇರುವುದು. ಹಿಂದಿಯಲ್ಲಿ ನೋಡಿ, ಬೇರೆ ಯಾವುದೇ ಭಾಷೆಯ ಚಿತ್ರರಂಗದಲ್ಲಿ ಹೀಗಿಲ್ಲ. ಸಮಂತಾ ಮದುವೆಯಾಯ್ತು. ಎಷ್ಟು ಸಿನಿಮಾಗಳನ್ನು ಮಾಡ್ತಿದ್ದಾರೆ. ಹಿಂದಿಯಲ್ಲಿ ಕರೀನಾ ಕಪೂರ್, ಸೋನಂ ಕಪೂರ್, ಐಶ್ವರ್ಯಾ ರೈ ಎಲ್ಲ ಮದುವೆಯ ನಂತರ ನಟನೆ ನಿಲ್ಲಿಸಿಬಿಟ್ಟಿದ್ದಾರಾ? ಕಂಗನಾ ನಟನಾಜೀವನದ ಉತ್ತುಂಗಕ್ಕೇರಿದ್ದೇ ಮದುವೆಯಾದ ನಂತರ. ನನ್ನ ವೈಯಕ್ತಿಕ ಬದುಕಿನಲ್ಲಿ ಆಗುವ ಬದಲಾವಣೆಗಳು ನಮ್ಮ ವೃತ್ತಿಜೀವನದ ಮೇಲೆ ಯಾಕೆ ಪರಿಣಾಮ ಬೀರಬೇಕು? ನಾವೇ ಇಂಥ ಮಿಥ್‌ಗಳನ್ನು ತೊಡೆದುಹಾಕಬೇಕು.

◆ **ಆಕ್ಟಿಂಗ್ ಜೊತೆ ನಿರ್ದೇಶನ–ನಿರ್ಮಾಣ ಮಾಡುವ ಆಲೋಚನೆ ಇದೆಯೇ?**

ನನಗೆ ಬರೆಯುವುದರಲ್ಲಿ ಆಸಕ್ತಿ ಇದೆ. ಈ ವರ್ಷ ಒಂದು ಕಥೆ ಬರೆಯಬೇಕು. ನಿರ್ದೇಶನಕ್ಕೆ ತುಂಬ ಪ್ರತಿಭೆ ಬೇಕು. ಅದರದ್ದೇ ಆದ ತಯಾರಿಗಳು ಬೇಕು. ನಾನಿನ್ನೂ ಚಿಕ್ಕವಳು. ನೋಡೋಣ... ಮುಂದೆ ಯಾವಾಗಲಾದರೂ ನಿರ್ದೇಶನ ಮಾಡಿದರೂ ಮಾಡಬಹುದು. ■